DAY — **22** SEAT NUMBER | | | | | | |

2025	III	11	1100	**J-438**	(K)

SOCIOLOGY (45)

Time : 3 Hrs. **(4 Pages)** **Max. Marks : 80**

ಸೂಚನೆ : (1) ಎಲ್ಲ ಪ್ರಶ್ನೆಗಳು ಕಡ್ಡಾಯವಾಗಿವೆ.

(2) ಬಲಬದಿಗೆ ಕೊಟ್ಟಿರುವ ಅಂಕಗಳು ಪ್ರಶ್ನೆಯ ಪೂರ್ಣಗುಣಗಳನ್ನು ತೋರಿಸುತ್ತದೆ.

(3) ನಾಲ್ಕು ಅಂಕದ ಪ್ರಶ್ನೆಗಳಿಗೆ ನಾಲ್ಕು ಅಂಶಗಳನ್ನು ಬರೆಯುವುದು ಅಪೇಕ್ಷಿತವಾಗಿದೆ.

(4) ಪ್ರತಿಯೊಂದು ಹೊಸ ಪ್ರಶ್ನೆಯ ಉತ್ತರವನ್ನು ಹೊಸ ಪುಟದ ಮೇಲೆ ಬರೆಯಬೇಕು.

ಪ್ರ. 1. ಕೆಳಗಿನ ವಸ್ತುನಿಷ್ಠ ಪ್ರಶ್ನೆಗಳಿಗೆ ಉತ್ತರಿಸಿರಿ : [20]

ಅ) ಕಂಸದಲ್ಲಿ ಕೊಟ್ಟಿರುವ ಯೋಗ್ಯ ಶಬ್ದಗಳನ್ನು ಆಯ್ಕೆ ಮಾಡಿ ಕೆಳಗಿನ ವಿಧಾನಗಳನ್ನು ಪೂರ್ಣಮಾಡಿರಿ ಮತ್ತು ಪುನಃ ಬರೆಯಿರಿ. (5)

(1) ವರ್ಧಮಾನ ಮಹಾವೀರ ಇವರು ಜೈನಧರ್ಮದಲ್ಲಿ..... ತೀರ್ಥಂಕರರಾಗಿದ್ದರು.
(24ನೇ, 22ನೇ, 16ನೇ)

(2) ..... ಸಮುದಾಯದಲ್ಲಿ ದುಯ್ಯಮ ಪ್ರಕಾರದ ಸಂಬಂಧಗಳು ಮಹತ್ವದ್ದಾಗಿವೆ.
(ಗ್ರಾಮೀಣ, ಆದಿವಾಸಿ, ನಗರ)

(3) ಗ್ರಾಮೀಣ ಪ್ರದೇಶಗಳಿಂದ ನಗರ ಪ್ರದೇಶಗಳಿಗೆ ವಲಸೆ ಹೋಗುವ ಪ್ರಕ್ರಿಯೆಗೆ ..... ಎಂದು ಕರೆಯುತ್ತಾರೆ.
(ಔದ್ಯೋಗಿಕರಣ, ನಗರೀಕರಣ, ಆಧುನಿಕರಣ)

(4) ಭಾರತದಲ್ಲಿ ಲೋಕದಲದ ಸ್ಥಾಪನೆ ..... ವರ್ಷದಲ್ಲಿ ಆಯಿತು.
(1954, 1964, 1974)

(5) ಕೌಟುಂಬಿಕ ಹಿಂಸಾಚಾರ ಕಾಯಿದೆ ..... ಇಸ್ವಿಯಲ್ಲಿ ಜಾರಿಗೆ ತರಲಾಯಿತು.
(1995, 2005, 2011)

(ಬ) ಕೆಳಗಿನ ಪ್ರತ್ಯೇಕ ಜೋಡಿಗಳಲ್ಲಿನ ತಪ್ಪಾದ ಜೋಡಿ ಗುರುತಿಸಿರಿ ಮತ್ತು ಸರಿಯಾದ ಉತ್ತರದೊಂದಿಗೆ ಜೋಡಿಸಿ ಬರೆಯಿರಿ : (5)

(I) (1) ರಾಜಮಾರ್ಗ — ಹಿಂದು ಧರ್ಮ
(2) ತೀರ್ಥಂಕರ — ಪಾರಶಿ ಧರ್ಮ
(3) ಸೇಂಟ ಥಾಮಸ — ಕ್ರಿಶ್ಚನ ಧರ್ಮ
(4) ಅಷ್ಟಾಂಗ ಮಾರ್ಗ — ಬೌದ್ಧ ಧರ್ಮ

(II) (1) ಮುಂಬೈ — ಝೋಪಡಪಟ್ಟಿ (ಕೊಳಚೆ)
(2) ದಿಲ್ಲಿ — ಝೂಗ್ಗಿ ಜೋಪಡಿ
(3) ಕೊಲ್ಕತ್ತಾ — ಚೇರಿ
(4) ಬೆಂಗಳೂರು — ಕೇರಿ

(III) (1) ಭಾಷೆ ಆಧಾರಿತ ಸಂಘರ್ಷ — ಭಯೋತ್ಪಾದನೆ
(2) ಧರ್ಮ ಆಧಾರಿತ ಸಂಘರ್ಷ — ಸಂಪ್ರದಾಯವಾದ
(3) ಜಾತಿ ಆಧಾರಿತ ಸಂಘರ್ಷ — ಜಾತಿವಾದ
(4) ಪ್ರದೇಶ ಆಧಾರಿತ ಸಂಘರ್ಷ — ಪ್ರದೇಶವಾದ

(IV) (1) ಸ್ತ್ರೀ ಚಳುವಳಿ — ಲೈಂಗಿಕ ಸಮಾನತೆ
(2) ಅಂತರರಾಷ್ಟ್ರೀಯ ಸ್ತ್ರೀ ವರ್ಷ — 1975
(3) ಸಮಾನತೆ — ಭಾರತೀಯ ಸ್ತ್ರೀಯರ ದರ್ಜೆ ವಿಷಯದ ವರದಿ
(4) ಹೊಂರೂಲ ಚಳುವಳಿ — ಮಾರ್ಗರೇಟ ಕಝುನ್ಸ

(V) (1) ಚರಸ — ಮಾದಕ ಪದಾರ್ಥಗಳ ವ್ಯಸನ
(2) ಹಿಂಸಾತ್ಮಕ ಚಿತ್ರಪಟ — ಅಂತರವಾಹಿನಿ (Internet) ವ್ಯಸನ
(3) ಸೇಲ್ಫಾಟಿಸ್ ಸಿಂಡ್ರೋಮ — ಅಮಲಿ ಪದಾರ್ಥಗಳ ವ್ಯಸನ
(4) ದೇಶಿ ದಾರು — ಮದ್ಯ ವ್ಯಸನಿ

(ಕ) ಚೌಕಟ್ಟಿನಲ್ಲಿ ಕೊಟ್ಟಿರುವ ಪರ್ಯಾಯಗಳಿಂದ ಯೋಗ್ಯ ಸಂಜ್ಞೆಯನ್ನು ಆರಿಸಿ ಕೊಟ್ಟಿರುವ ವಿಧಾನಗಳ ಮುಂದೆ ಪುನ ಃ ಬರೆಯಿರಿ : (5)

ದೇವರಾಯಿ, ಶಿಕ್ಷಕ, ಮಹಾತ್ಮಾ ಗಾಂಧಿಜೀ, ಡಾ. ಬಿ.ಆರ್. ಅಂಬೇಡ್ಕರ, ಔದ್ಯೋಗಿಕರಣ, ಪಿತೃ ಪ್ರಧಾನ ಪದ್ಧತಿ

(1) ಭಾರತೀಯ ಸಂವಿಧಾನ ಕರಡು ಸಮಿತಿಯ ಅಧ್ಯಕ್ಷರು
(2) ಆದಿವಾಸಿ ಸಮುದಾಯದಲ್ಲಿನ ಪವಿತ್ರ ವನಗಳು
(3) ಅರ್ಜಿತ ದರ್ಜೆ
(4) ಉತ್ಪಾದನೆ ಪ್ರಕ್ರಿಯೆಯಲ್ಲಿನ ಯಂತ್ರೋಪಕರಣ
(5) ಸ್ತ್ರೀಯರ ಕನಿಷ್ಠ ದರ್ಜೆ

(ಡ) ಕೆಳಗೆ ಗೆರೆಹೊಡೆದ ಶಬ್ದಗಳ ಜಾಗದಲ್ಲಿ ಸರಿಯಾದ ಶಬ್ದ ಬರೆದು ವಿಧಾನಗಳನ್ನು ಪುನ : ಬರೆಯಿರಿ: (5)

(1) ನಿರ್ಜೀವ ವಸ್ತುಗಳ ಪೂಜೆ ಮಾಡುವ ಪದ್ಧತಿಗೆ ಜೀವಾತ್ಮವಾದ ಎಂದು ಕರೆಯುತ್ತಾರೆ.

(2) ಸರ್ವಧರ್ಮ ಸಮಭಾವ ಭಾರತದ ಏಕತೆಯ ಸಂಕಲ್ಪನೆ ತೋರಿಸುತ್ತದೆ.

(3) 1996 ರಲ್ಲಿ ಹೊಸ ಆರ್ಥಿಕ ಧೋರಣೆಯನ್ನು ಸ್ವೀಕರಿಸಲಾಯಿತು.

(4) ಕಾವೇರಿ ನದಿಯ ಮೇಲೆ ಸರದಾರ ಸರೋವರ ಸೇತುವೆಯನ್ನು ಕಟ್ಟಲಾಯಿತು.

(5) ವೃದ್ಧತ್ವ ಇದು ಕೃತ್ರಿಮ ಪ್ರಕ್ರಿಯೆಯಾಗಿದೆ.

ಪ್ರ.2. ಕೆಳಗಿನ ಪ್ರಶ್ನೆಗಳಿಗೆ ಸ್ವಲ್ಪದರಲ್ಲಿ ಟಿಪ್ಪಣಿ ಬರೆಯಿರಿ (ಬೇಕಾದ ಎರಡು): [8]

(1) ಪುರುಷಾರ್ಥಗಳು (2) ಭಾರತದಲ್ಲಿನ ವಿವಿಧತೆ

(3) ಅಂಕಿಕೃತಕರಣದ ವೈಶಿಷ್ಟ್ಯಗಳು

ಪ್ರ.3. ಕೆಳಗಿನ ಪ್ರಶ್ನೆಗಳಿಗೆ ವ್ಯತ್ಯಾಸಗಳನ್ನು ಬರೆಯಿರಿ (ಬೇಕಾದ ಮೂರು) : [12]

(1)	ಆದಿವಾಸಿ ಸಮುದಾಯ	-	ನಗರ ಸಮುದಾಯ
(2)	ಕ್ರಿಶ್ಚನ ಧರ್ಮ	-	ಇಸ್ಲಾಂ ಧರ್ಮ
(3)	ಆಧುನಿಕರಣ	-	ಜಾಗತಿಕರಣ
(4)	ಸ್ವಾತಂತ್ರ್ಯಪೂರ್ವ ಕಾಲದಲ್ಲಿಯ ಮಹಿಳಾ ಚಳುವಳಿ	-	ಸ್ವಾತಂತ್ರ್ಯೋತ್ತರ ಕಾಲದಲ್ಲಿಯ ಮಹಿಳಾ ಚಳುವಳಿ
(5)	ವೈಯಕ್ತಿಕ ಸಮಸ್ಯೆಗಳು	-	ಸಾಮಾಜಿಕ ಸಮಸ್ಯೆಗಳು

ಪ್ರ.4. ಕೆಳಗೆ ಕೊಟ್ಟಿರುವ ಸಂಕಲ್ಪನೆಗಳನ್ನು ಉದಾಹರಣೆ ಸಹಿತ ಸ್ಪಷ್ಟಮಾಡಿರಿ (ಬೇಕಾದ ಎರಡು): [8]

(1) ಆಶ್ರಮ ವ್ಯವಸ್ಥೆ (2) ಸಂಪ್ರದಾಯವಾದ

(3) ನಗರಿಕರಣ

ಪ್ರ.5. (ಅ) ಕೆಳಗಿನ ಸಂಕಲ್ಪನೆ ಚಿತ್ರ ಪೂರ್ಣ ಮಾಡಿರಿ : (4) [12]



(ಬ) ಕೆಳಗಿನ ವಿಧಾನಗಳು ಸರಿ ಅಥವಾ ತಪ್ಪು ಎಂಬುದನ್ನು ಹೇಳಿ ಕಾರಣ ಸಹಿತ ಸ್ಪಷ್ಟಮಾಡಿರಿ (8)
(ಬೇಕಾದ ಎರಡು) :

(1) ವಸಾಹತು ಕಾಲದ ಕಾಯಿದೆಗಳು ಭಾರತೀಯ ಸಮಾಜದ ಮೇಲೆ ಪ್ರಭಾವ ಬೀರಿವೆ.

(2) ಸಮಾಜ ಸುಧಾರಕರು ಭಾರತೀಯ ಸಮಾಜದಲ್ಲಿ ಪರಿವರ್ತನೆ ಮಾಡಿದರು.

(3) ತಂತ್ರಜ್ಞಾನ ಇದು ಯಾವಾಗಲೂ ಸಾಮಾಜಿಕ ಪ್ರಗತಿಗಾಗಿ ಉಪಯುಕ್ತ ಇರುವುದಿಲ್ಲ.

ಪ್ರ.6. (ಅ) ಕೆಳಗೆ ಕೊಟ್ಟಿರುವ ಅಂಕಣ ಓದಿ ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿರಿ: (6) [10]

ಸರ್ವಶಿಕ್ಷಣ ಅಭಿಯಾನ (SSA) ಇದು ಭಾರತ ಸರ್ಕಾ ರದ ಒಂದು ಕಾರ್ಯ ಕ್ರಮವಾಗಿದೆ. ಇದರಲ್ಲಿ 6 ರಿಂದ 14 ವರ್ಷದೊಳಗಿನ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯದ ಶಿಕ್ಷಣ ಕೊಡುವ ವ್ಯವಸ್ಥೆ ಮಾಡಲಾಗಿದೆ. ಈ ಕಾರ್ಯ ಕ್ರಮ ಜಾರಿಗೆ ತರಲು ಭಾರತದ ಮಾಜಿ ಪ್ರಧಾನಮಂತ್ರಿ ಶ್ರೀ ಅಟಲ ಬಿಹಾರಿ ವಾಜಪೇಯಿ ಅವರು 1993-94ರಲ್ಲಿ ಮುಂದಾಳತ್ವವಹಿಸಿದರು. ತದನಂತರ 2000-2001 ರಲ್ಲಿ ಈ ಕಾರ್ಯಕ್ರಮ ಪೂರ್ಣ ವಾಗಿ ಜಾರಿಗೆ ಬಂದಿತು. ಈ ಕಾರ್ಯಕ್ರಮದಲ್ಲಿ ಶಿಕ್ಷಣ ಇದು ಮೂಲಭೂತ ಅಧಿಕಾರವೆಂದು ಮಾನ್ಯ ಮಾಡಲಾಯಿತು.

ಇದರ ಜೊತೆಗೆ 15 ಆಗಸ್ಟ 1995 ರಲ್ಲಿ ಭಾರತ ಸರ್ಕಾ ರವು ಪ್ರಾಥಮಿಕ ಶಿಕ್ಷಣದ ಸಲುವಾಗಿ 'ಪೋಷಣ ಆಧಾರ ರಾಷ್ಟ್ರೀಯ ಕಾರ್ಯಕ್ರಮ' (National Programme of Nutritional Support to Primary Education - NPNSPE) ಜಾರಿಗೆ ತಂದರು. ಆವಾಗಿನಿಂದ ಶಾಲೆಗೆ ಹೋಗುವ ಮಕ್ಕಳಿಗೆ ಉಚಿತ ಮಧ್ಯಾಹ್ನ ಭೋಜನ (Midday meal) ಈ ಸಂಕಲ್ಪನೆ ಅಸ್ತಿತ್ವಕ್ಕೆ ಬಂದಿತು. ಗ್ರಾಮಪಂಚಾಯತಿ, ನಗರಪಾಲಿಕೆಯಂತಹ ಸ್ಥಾನಿಕ ಸಂಸ್ಥೆಗಳಲ್ಲಿ ಸಹ ಜಾರಿಗೆ ತರಲಾಗಿದೆ. ಮಕ್ಕಳಿಗೆ ಮಧ್ಯಾಹ್ನ ಭೋಜನ ಕೊಡುವುದು ಕಡ್ಡಾಯವಾಗಿದೆ. ಇದರಲ್ಲಿ ಮಕ್ಕಳಿಗೆ ದಿನನಿತ್ಯ ಉತ್ತಮ ಮತ್ತು ಪೋಷಕ ಊಟ ಕೊಡುವುದು ಅವಶ್ಯಕವಾಗಿದೆ. ಸಾಕಷ್ಟು ಸಂಸ್ಥೆಗಳು ಊಟ ಸಿದ್ಧಪಡಿಸಿ ವೇಳೆಯಲ್ಲಿ ಶಾಲೆಗಳಿಗೆ ತಲುಪಿಸುತ್ತಾರೆ.

ಸಾರ್ವತ್ರಿಕ ಶಿಕ್ಷಣ ಮತ್ತು ಪೋಷಣ ಪರಸ್ಪರ ಬೇರ್ಪಡಿಸಲು ಬರುವುದಿಲ್ಲ. ಗ್ರಾಮೀಣ ಮತ್ತು ನಗರಪಾಲಿಕೆಯ ಶಾಲೆಯಲ್ಲಿನ ಮಕ್ಕಳು ಭೋಜನದ ದಾರಿ ಕಾಯುತ್ತಾರೆ. ಈ ಆಹಾರ ಮಕ್ಕಳಿಗೆ ದಿನದ ಮುಖ್ಯ ಆಹಾರವಾಗಿದೆ.

ಪ್ರಶ್ನೆಗಳು :

(1) ಸರ್ವಶಿಕ್ಷಾ ಅಭಿಯಾನದಿಂದ ಉಪಯೋಗವಾಗಿದೆಯೇ ? ನಿಮ್ಮ ಅಭಿಪ್ರಾಯ ತಿಳಿಸಿ.

(2) ಮಧ್ಯಾಹ್ನ ಭೋಜನದಿಂದ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಲು ಕಾರಣವಾಗಿದೆ. ನಿಮ್ಮ ಅಭಿಪ್ರಾಯ ಹೇಳಿರಿ.

(ಬ) ತಮ್ಮ ವೈಯಕ್ತಿಕ ಅಭಿಪ್ರಾಯ ಬರೆಯಿರಿ (ಬೇಕಾದ ಒಂದು): (4)

(1) ಏಕತೆಯ ದೃಷ್ಟಿಯಿಂದ ಶಾಲೆಯ ಸಮವಸ್ತ್ರದ ಮಹತ್ವ ಹೇಳಿರಿ.

(2) ಪರಿಸರ ಶಿಕ್ಷಣದಿಂದ ನಿಮ್ಮ ವರ್ತನೆಯ ಮೇಲೆ ಪರಿಣಾಮವಾಗಿದೆಯೇ ?

ಪ್ರ.7. ಕೆಳಗಿನ ಪ್ರಶ್ನೆಗಳಲ್ಲಿ (ಬೇಕಾದ ಒಂದಕ್ಕೆ) 150 ರಿಂದ 200 ಶಬ್ದಗಳಲ್ಲಿ ಸವಿಸ್ತಾರವಾಗಿ ಉತ್ತರ ಬರೆಯಿರಿ : [10]

(1) ಗ್ರಾಮೀಣ ಸಮುದಾಯದಲ್ಲಿನ ಸಮಸ್ಯೆಗಳನ್ನು ಚರ್ಚೆ ಮಾಡಿ ಮತ್ತು ಸಮಸ್ಯೆಗಳನ್ನು ಬಿಡಿಸಲು ಉಪಾಯಯೋಜನೆಗಳನ್ನು ಸೂಚಿಸಿರಿ ?

(2) ಕೃಷಿಕರ ಆತ್ಮಹತ್ಯೆಯ ಕಾರಣಗಳನ್ನು ಬರೆದು, ಅವರ ಸಮಸ್ಯೆಗಳನ್ನು ಬಿಡಿಸುವ ಉಪಾಯಯೋಜನೆಗಳನ್ನು ಸೂಚಿಸಿರಿ.

◆◆◆